Online Newspaper Clipping Service
**Dated, Friday 24th February – 2017**

ವಿಜಯವಾಣಿ

**Pg.No.06**

# ಏಕರೂಪ ಕೌನ್ಸೆಲಿಂಗ್ ಈ ವರ್ಷವೂ ಡೌಟು!

■ ದೇವರಾಜ್ ಎಲ್. ಬೆಂಗಳೂರು

ವೈದ್ಯಕೀಯ ಮತ್ತು ದಂತವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ 'ಏಕರೂಪದ ಕೌನ್ಸೆಲಿಂಗ್' ನಡೆಸುವುದು ಈ ವರ್ಷ ಕೂಡ ಕಷ್ಟ ಸಾಧ್ಯ.

ರಾಜ್ಯ ಸರ್ಕಾರವೇನೋ ಏಕರೂಪದ ಕೌನ್ಸೆಲಿಂಗ್ ನಡೆಸುವ ಆಲೋಚನೆಯಲ್ಲಿದೆ. ಆದರೆ, ಖಾಸಗಿ ಕಾಲೇಜುಗಳು ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದು, 2017-18ನೇ ಸಾಲಿನ ಕೌನ್ಸೆಲಿಂಗ್ ಪ್ರಕ್ರಿಯೆ ಹಿಂದಿನಂತೆಯೇ ನಡೆಯುವ ಸಾಧ್ಯತೆಯೇ ಹೆಚ್ಚಿದೆ.

» ಖಾಸಗಿ ಕಾಲೇಜುಗಳ ಒಕ್ಕೂಟ ವಿರೋಧ
» ಜಾರಿ ಆಗುವುದು ಕಷ್ಟ



ಕಾಮೆಡ್-ಕೆ ಜತೆಗೆ ರಾಜ್ಯ ಭಾಷಾ ಅಲ್ಪಸಂಖ್ಯಾತ ಖಾಸಗಿ ಕಾಲೇಜುಗಳ ಒಕ್ಕೂಟ (ಕೆಆರ್‌ಎಲ್‌ಎಂಪಿಸಿಎ) ಕೂಡ ಕೈ ಜೋಡಿಸಿದ್ದು, ಯಾವುದೇ ಕಾರಣಕ್ಕೂ ಏಕರೂಪದ ಕೌನ್ಸೆಲಿಂಗ್ ಒಪ್ಪಿಕೊಳ್ಳುವುದಿಲ್ಲವೆಂದು ತಿಳಿಸಿದೆ.

ಖಾಸಗಿ ಒಕ್ಕೂಟ ನಡೆಸುವ ಕೌನ್ಸೆಲಿಂಗ್‌ನಲ್ಲಿ ಪಾರದರ್ಶಕತೆ ಇಲ್ಲವೆಂದು ಕೆಲ ವಿದ್ಯಾರ್ಥಿಗಳು ಆರೋಪಿಸಿದ್ದರು. ಈ ಹಿನ್ನೆಲೆಯಲ್ಲಿ ಏಕರೂಪ ಕೌನ್ಸೆಲಿಂಗ್ ಅವಶ್ಯಕತೆ ಕುರಿತು ಚರ್ಚೆ ನಡೆಸುತ್ತಿದೆ. 2016ರಲ್ಲಿ ನೀಟ್ ಜಾರಿಗೆ ಬಂದ ದಿನದಿಂದಲೇ ಏಕರೂಪ ಕೌನ್ಸೆಲಿಂಗ್ ನಡೆಸಲು ಸರ್ಕಾರ ಚಿಂತನೆ ನಡೆಸಿತ್ತು. ಆದರೆ, ಖಾಸಗಿ ಕಾಲೇಜುಗಳ ಒಕ್ಕೂಟ ವಿರೋಧ ವ್ಯಕ್ತಪಡಿಸಿದವು.

**ಏಕೆ ಬೇಕು?:** ಸದ್ಯ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಜತೆ ಖಾಸಗಿ ಸಂಸ್ಥೆಗಳು ಕೂಡ ಕೌನ್ಸೆಲಿಂಗ್ ನಡೆಸುತ್ತಿದ್ದು, ಉತ್ತಮ ಕಾಲೇಜಿನಲ್ಲಿ ಸೀಟು ಪಡೆಯುವ ಉದ್ದೇಶದಿಂದ ಖಾಸಗಿ ಕಾಲೇಜುಗಳ ಒಕ್ಕೂಟ ನಡೆಸುವ ಕೌನ್ಸೆಲಿಂಗ್‌ನಲ್ಲೂ ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಪ್ರತಿ ಕೌನ್ಸೆಲಿಂಗ್‌ಗೂ ಪ್ರವೇಶ ಶುಲ್ಕ ಕಡ್ಡಾಯ. ಇದರಿಂದ ಆರ್ಥಿಕ ಹೊರೆ ಜತೆಗೆ ಸಾಕಷ್ಟು ಗೊಂದಲಗಳೂ ಉಂಟಾಗುತ್ತವೆ. ಕೌನ್ಸೆಲಿಂಗ್ ಕೇಂದ್ರಗಳಿಗೆ ವಿದ್ಯಾರ್ಥಿಗಳ ಹಾಜರಿ ಕಡ್ಡಾಯ. ಬಹುತೇಕ ಸಲ ಕೌನ್ಸೆಲಿಂಗ್ ಮುಂದೂಡಿಕೆಯಾಗುವುದರಿಂದ ಪ್ರತಿ ಬಾರಿ ಹೋಗಿಬರುವುದೂ ಕಷ್ಟವಾಗುತ್ತದೆ.

> ಡೀಮ್ಡ್ ವಿವಿಗಳಿಗೆ ಪ್ರತ್ಯೇಕವಾಗಿ ಕೌನ್ಸೆಲಿಂಗ್ ನಡೆಸಲು ಸರ್ಕಾರ ಅನುಮತಿ ನೀಡಿದೆ. ಹೀಗಿರುವಾಗ ನಮ್ಮಂತಹ ಸಣ್ಣ ಪುಟ್ಟ ಕಾಲೇಜುಗಳ ಮೇಲೇಕೆ ಕಣ್ಣು? ನಮಗೂ ಸ್ವಲ್ಪ ಸ್ವಾತಂತ್ರ್ಯ ಬೇಡವೇ?
>
> । ಶಫಿ ಪ್ರಧಾನ ಕಾರ್ಯದರ್ಶಿ ಕೆಆರ್‌ಎಲ್‌ಎಂಪಿಸಿಎ

> ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಏಕರೂಪ ಕೌನ್ಸೆಲಿಂಗ್ ಮಾಡಬೇಕೆಂದುಕೊಂಡಿದ್ದೇವೆ. ಖಾಸಗಿ ಕಾಲೇಜುಗಳ ಒಕ್ಕೂಟದೊಂದಿಗೆ ಚರ್ಚಿಸುತ್ತೇವೆ.
>
> । ಶರಣ ಪ್ರಕಾಶ ಪಾಟೀಲ ವೈದ್ಯಕೀಯ ಶಿಕ್ಷಣ ಸಚಿವ

> ಇಷ್ಟು ವರ್ಷ ಕರ್ನಾಟಕ ಮೆಡಿಕಲ್, ಇಂಜಿನಿಯರಿಂಗ್ ಮತ್ತು ಡೆಂಟಲ್ ಕಾಲೇಜುಗಳ ಒಕ್ಕೂಟ(ಕಾಮೆಡ್-ಕೆ)ವೇ ಕೌನ್ಸೆಲಿಂಗ್ ನಡೆಸಿಕೊಂಡು ಬರುತ್ತಿದೆ. ಇದೀಗ ಸರ್ಕಾರವೇ ಕೌನ್ಸೆಲಿಂಗ್ ನಡೆಸುತ್ತೇವೆ ಎಂದರೆ ಇದು ಸರಿಯಲ್ಲ. ಇದಕ್ಕೆ ನಮ್ಮ ಒಮ್ಮತ ಇಲ್ಲ.
>
> । ಎಂ.ಕೆ. ಪಾಂಡುರಂಗ ಶೆಟ್ಟಿ ಕಾರ್ಯದರ್ಶಿ ಅನುದಾನರಹಿತ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಸಂಘ

ವಿಜಯ ಕರ್ನಾಟಕ



# ಪಿಜಿ ಸಿಇಟಿಗೆ ಅರ್ಜಿ ಆಹ್ವಾನ

■ **ವಿಕ ಸುದ್ದಿಲೋಕ** ಬೆಂಗಳೂರು

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) 2017-18ನೇ ಸಾಲಿನ ಸ್ನಾತಕೋತ್ತರ ವೈದ್ಯಕೀಯ, ದಂತ ವೈದ್ಯ ಪದವಿ ಹಾಗೂ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಆಸಕ್ತರು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಮಾ. 1ರೊಳಗೆ ಆನ್‌ಲೈನ್ ಮೂಲಕ ನೋಂದಣಿ ಮಾಡಿ, ದಾಖಲಾತಿ ಪರಿಶೀಲನೆಗೆ ಅರ್ಹತೆ ಪಡೆಯಬಹುದು. ಅರ್ಜಿ ಸಲ್ಲಿಸುವ ವಿಧಾನ, ಶುಲ್ಕ ಪಾವತಿ, ಶೈಕ್ಷಣಿಕ ಅರ್ಹತೆ, ಇಚ್ಛೆ/ಆಯ್ಕೆ ದಾಖಲಿಸುವ ವೇಳಾಪಟ್ಟಿ, ನಿಗದಿಪಡಿಸಿರುವ ಇನ್ನಿತರ ಷರತ್ತುಗಳಿಗಾಗಿ ಪ್ರಾಧಿಕಾರದ ವೆಬ್‌ಸೈಟ್ ಸಂಪರ್ಕಿಸಬಹುದು. ವೆಬ್‌ಸೈಟ್ ವಿಳಾಸ: http://kea.kar.nic.in

ಸಂಯುಕ್ತ ಕರ್ನಾಟಕ

Pg.No.04



# ವೈದ್ಯರಿಗೆ ಗ್ರಾಮೀಣ ಸೇವೆ ವರದಿ ಆಧರಿಸಿ ಸರ್ಕಾರದ ಕ್ರಮ

**ಬೆಂಗಳೂರು:** ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ವೈದ್ಯರ ಸೇವೆ ಕಡ್ಡಾಯಗೊಳಿಸಲು ಡಾ. ಸಿಎನ್ ಮಂಜು ನಾಥ್ ನೀಡುವ ವರದಿ ಆಧರಿಸಿ ಸರ್ಕಾರ ಕ್ರಮ ಜರುಗಿಸಲಿದೆ ಎಂದು ವೈದ್ಯಕೀಯ ಸಚಿವ ಡಾ. ಶರಣಪ್ರಕಾಶ್ ಪಾಟೀಲ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಹೃದ್ರೋಗ ತಜ್ಞರ 63ನೇ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ವೈದ್ಯರು ಸೇವೆ ಸಲ್ಲಿಸಲು ಹಿಂದೆ ಮುಂದೆ ನೋಡುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಉನ್ನತ ಮಟ್ಟದ ಹೃದ್ರೋಗ ತಜ್ಞರನ್ನು ಸೆಳೆಯಲು ಮಾನದಂಡ ನಿಗದಿಪಡಿಸಲು ಡಾ. ಮಂಜುನಾಥ್ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿ ನೀಡುವ ವರದಿ ಅನುಸರಿಸಿ ಕ್ರಮ ಜರುಗಿಸಲಾಗುವುದು ಎಂದರು.

ಸರ್ಕಾರವು ಮೈಸೂರು, ಕಲಬುರಗಿ, ಹುಬ್ಬಳ್ಳಿ ಹಾಗೂ ಬೆಳಗಾವಿಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಪ್ರಾರಂಭಿಸುತ್ತಿದೆ. ಬಿಪಿಎಲ್, ಪ.ಜಾತಿ–ಪ.ಪಂ ಜನರಿಗೆ ಉಚಿತ ಚಿಕಿತ್ಸೆ ಕಲ್ಪಿಸಲಾಗುವುದು. ಎಪಿ–ಎಲ್ ಕಾರ್ಡ್‌ದಾರರಿಗೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡ ಲಾಗುವುದು. ಯುವವೈದ್ಯರು ಗ್ರಾಮೀಣ ಪ್ರದೇಶ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಸೇವೆಗೆ ಮುಂದೆ ಬರಬೇಕಿದೆ ಎಂದರು.

ಐಎಸಿಟಿಎಸ್‌ಸಿಐಎನ್‌ನ ಅಧ್ಯಕ್ಷ ಡಾ. ವಿವೇಕ್ ಜವಳಿ ಮಾತನಾಡಿ, ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದಲ್ಲಿ ಭಾರತದಲ್ಲಿ ಹೃದಯ ಶಸ್ತ್ರಚಿಕಿತ್ಸೆ ತಜ್ಞರ ಸಂಖ್ಯೆ ಬಹಳ ಕಡಿಮೆ. ಭಾರತೀಯ ವೈದ್ಯಕೀಯ ಮಂಡಳಿ ಕೆಲ ವೈದ್ಯ ಕೇಂದ್ರಗಳಲ್ಲಿ ಹೃದಯ ಶಸ್ತ್ರಚಿಕಿತ್ಸೆ ಸಂಬಂಧಿಸಿದಂತೆ ಫೆಲೋಷಿಪ್ ಪ್ರಮಾಣ ಪತ್ರ ಕೋರ್ಸ್‌ಗಳನ್ನು ಪ್ರಾರಂಭಿಸಿದ್ದು, ಅಲ್ಲಿ ಸರ್ಜರಿ ಕೋರ್ಸ್‌ಗಳಿಗೆ ಸೇರಿಕೊಂಡರೆ ಒಳ್ಳೆಯದು ಎಂದರು.

ಮೂರು ದಿನಗಳ ಕಾಲ ನಡೆಯುವ ಸಮ್ಮೇಳನದಲ್ಲಿ 2 ಸಾವಿರ ಹೃದ್ರೋಗ ತಜ್ಞರು ಪಾಲ್ಗೊಂಡಿದ್ದು, ವೈದ್ಯಕೀಯ, ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಉಪನ್ಯಾಸ, ಸಂವಾದ, ಚರ್ಚೆಯನ್ನು ಏರ್ಪಡಿಸಲಾಗಿದೆ. ಈ ವರ್ಷ ಮುಂಬೈಯನ ಡಾ. ರತ್ನ ಮಗೋತ್ರ, ಕೋಲ್ಕತ್ತಾದ ಡಾ. ಸುಶೀಲ ಶ್ರೀಪಾದ ಅವರಿಗೆ ಜೀವಮಾನ ಸಾಧನ ಪ್ರಶಸ್ತಿಯನ್ನು ನೀಡಲಾಗುತ್ತಿದೆ ಎಂದು ತಿಳಿಸಿದರು.